ಕಾವ್ಯಸಂಕ



ಆರಿಫ್ ರಾಜಾ

ಯುವ ಕವಯಿತ್ರಿ:
**ಯು ಯೌಯೌ**
ದೇಶ: **ಚೀನಾ**



# ಕಾಲ ಸರಿದಂತೆ ಸಂತೋಷ ನಮ್ಮಿಂದ ದೂರವಾಗುತ್ತದೆ

1990ರಲ್ಲಿ ಜನಿಸಿದ ಯು ಯೌಯೌ ಸಿಚುವಾನೀಸ್ ಕವಿ. ಪ್ರಸ್ತುತ ಚೆಂಗ್ದುವಿನಲ್ಲಿ ವಾಸ. ಚೀನಾದ ಪ್ರತಿಷ್ಠಿತ ಪತ್ರಿಕೆಗಳು ಇವರ ಕವನಗಳಿಗೆ ಜಾಗ ನೀಡಲಾರಂಭಿಸಿದಾಗ, ಸಣ್ಣ ವಯಸ್ಸಿನಲ್ಲೇ ವಿಮರ್ಶಾ ಜಗತ್ತಿನ ಗಮನ ಸೆಳೆಯಲಾರಂಭಿಸಿದರು. 90ರ ದಶಕದ ನಂತರ ಹೊಸ ಪೀಳಿಗೆಯ ಪ್ರಾತಿನಿಧಿಕ ಧ್ವನಿಯಾಗಿ ಹೊರಹೊಮ್ಮಿದರು. ಗಂಭೀರ ಧ್ವನಿಯ ಇವರ ರಚನೆಗಳಲ್ಲಿ ಆಧುನಿಕ ಸ್ತ್ರೀವಾದದ ಸೂಕ್ಷ್ಮ ಪಟ್ಟು ಹಾಗೂ ವೈವಿಧ್ಯಮಯ ರೂಪಗಳನ್ನು ಕಾಣಬಹುದು. ಯು ಯೌಯೌ ಬರೆದ ಕವಿತೆಗಳು ಇಂಗ್ಲಿಷ್, ರಷ್ಯನ್, ಸ್ವೀಡಿಷ್, ಜಪಾನೀಸ್, ಫ್ರೆಂಚ್, ಅರೇಬಿಕ್ ಮುಂತಾದ ಜಾಗತಿಕ ಭಾಷೆಗಳಿಗೆ ತರ್ಜುಮೆಗೊಂಡಿವೆ. ಔದ್ಯೋಗಿಕ ಭದ್ರತೆಗಾಗಿ business management and accountingನಲ್ಲಿ ಉನ್ನತ ಪದವಿ ಪಡೆದರೂ, ಕಾವ್ಯದ ಮೇಲಿನ ಇವರ ನಿಡುಗಾಲದ ಮೋಹ ಕಿಂಚಿತ್ತೂ ಕಡಿಮೆಯಾಗಿಲ್ಲ. ಈಗಾಗಲೇ ತಮ್ಮ ತಾಯ್ನುಡಿಯಲ್ಲಿ ನಾಲ್ಕು ಕವನ ಸಂಕಲನಗಳನ್ನು ಹೊರತಂದಿದ್ದಾರೆ. 2019ರಲ್ಲಿ ಇವರ ಮ್ಯಾಂಡರಿನ್ ಭಾಷೆಯ ಆಯ್ದ ಕವಿತೆಗಳ ಇಂಗ್ಲಿಷ್ ಅನುವಾದ 'My Tenantless Body' ಕೃತಿಯನ್ನು ಪ್ರತಿಷ್ಠಿತ Poetry Translation Centre London ಪ್ರಕಟಿಸಿದೆ.